## ಮಂಗಳೂರುವಿಶ್ವವಿದ್ಯಾನಿಲಯ

**ದಿನಾಂಕ 19.06.2024 ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ (ಹೊಸಸೆನೆಟ್) ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2024-25ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳು**

**ಉಪಸ್ಥಿತರು**

**ಅನುಪಸ್ಥಿತರು**

### ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು, ಎಲ್ಲಾ ಸದಸ್ಯರುಗಳು, ವಿಶೇಷ ಆಹ್ವಾನಿತರು ಮತ್ತು ಮಾಧ್ಯಮ ಮಿತ್ರರನ್ನು ಸಭೆಗೆ ಸ್ವಾಗತಿಸಿ, ಸಭಾಧ್ಯಕ್ಷರಲ್ಲಿ ಸಭೆಯನ್ನು ಮುಂದುವರಿಸುವಂತೆ ಕೋರಿದರು.

### ಪ್ರಾಸ್ತಾವಿಕ

1. ಮಂಗಳೂರು ವಿಶ್ವವಿದ್ಯಾನಿಲಯದ 42ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಅಚ್ಚುಕಟ್ಟಾಗಿ ನಡೆಸಲಾಗಿರುವ ಬಗ್ಗೆ ಮಾತನಾಡುತ್ತಾ, ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿದ ಎಲ್ಲಾ ಸಿಂಡಿಕೇಟು, ಶೈಕ್ಷಣಿಕ ಮಂಡಳಿ ಸದಸ್ಯರುಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು, ಘಟಿಕೋತ್ಸವ ಏರ್ಪಾಟುಗಳಿಗಾಗಿ ರಚಿಸಲಾದ ಎಲ್ಲಾ ಸಮಿತಿ ಸಂಚಾಲಕರು, ಸದಸ್ಯರುಗಳಿಗೆ, ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳಿಗೆ, ವಿದ್ಯಾರ್ಥಿ ಸ್ವಯಂ ಸೇವಕರುಗಳಿಗೆ ಮತ್ತು ಇತರರಿಗೆ ಮಾನ್ಯ ಕುಲಪತಿಯವರು ತಮ್ಮ ಮನದಾಳದ ಕೃತಜ್ಞತೆಗಳನ್ನು ಅರ್ಪಿಸಿದರು.

**I. ದಿನಾಂಕ 19.03.2024 ರಂದು ನಡೆದ (ಆನ್‌ಲೈನ್ ಮೂಲಕ) ಶೈಕ್ಷಣಿಕ ಮಂಡಳಿಯ 2023-24ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.**

-ದೃಢೀಕರಿಸಲಾಯಿತು.-

**II. ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ವಿನಿಯಮಗಳು /ಪರಿನಿಯಮಗಳು**

-ಯಾವುದೂ ಇರುವುದಿಲ್ಲ.-

**III. ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು:**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ 1:1 (2024-25)

**ವಿಷಯ:** ಸ್ನಾತಕೋತ್ತರ ವಾಣಿಜ್ಯ ಕಾರ್ಯಕ್ರಮದ ವಿದ್ಯಾರ್ಥಿ ಪ್ರವೇಶಾರ್ಹತೆ ತಿದ್ದುಪಡಿ ಅನುಮೋದನೆ ಬಗ್ಗೆ.

**ನಿರ್ಣಯ:** ತಿದ್ದುಪಡಿ ವಿನಿಯಮವನ್ನು ಅನುಮೋದಿಸಲಾಗಿ, ತಿದ್ದುಪಡಿ ವಿನಿಯಮವನ್ನು ಸರಕಾರಕ್ಕೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ 1:2 (2024-25)

**ವಿಷಯ:** ಸೈಂಟ್ ಫಿಲೋಮಿನಾ ಕಾಲೇಜು, ಪುತ್ತೂರು ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಶೈ.ಮ.ಸಾ.ಸ 1:3 (2024-25)

**ವಿಷಯ:** 2024-25ನೇ ಸಾಲಿಗೆ ಶೈಕ್ಷಣಿಕ ಮಂಡಳಿ ಸಮಿತಿಯನ್ನು ರಚಿಸುವ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಶೈ.ಮ.ಸಾ.ಸ 1:4 (2024-25)

**ವಿಷಯ:** ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಸಮಾಜಕಾರ್ಯ ಕಾರ್ಯಕ್ರಮದ ಪಠ್ಯಕ್ರಮಗಳ ಕಾರ್ಯಯೋಜನೆಯಲ್ಲಿ ಹಂಚಿಕೆ ಮಾಡಲಾದ ಬೋಧನಾ ಅವಧಿ ಮತ್ತು ಕ್ರೆಡಿಟುಗಳ ಬಗ್ಗೆ ಸ್ಪಷ್ಟನೆಯನ್ನು ಸಭೆಯ ಗಮನಕ್ಕೆ ತರಲಾಯಿತು.

ಮುಂದುವರಿದು, ಎಲ್ಲಾ ಅಧ್ಯಯನ ಮಂಡಳಿಗಳಿಗೂ ಪಠ್ಯಕ್ರಮಗಳನ್ನು ತಯಾರಿಸುವ ಸಂದರ್ಭದಲ್ಲಿ ಕೋರ್ಸುಗಳಿಗೆ ಹಂಚಿಕೆ ಮಾಡಲಾಗುವ ಕ್ರೆಡಿಟುಗಳನ್ನು ಅವುಗಳ ಬೋಧನಾ ಅವಧಿ ಮತ್ತು ಕಾರ್ಯಭಾರಕ್ಕೆ ಪರಿಗಣಿಸಿಕೊಳ್ಳುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲು ನಿರ್ಣಯಿಸಲಾಯಿತು.

ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ಎಲ್ಲಾ ಕಾರ್ಯಕ್ರಮಗಳಿಗೂ ಸಂಬಂಧಿಸಿದಂತೆ ಕೋರ್ಸುಗಳ ಕ್ರೆಡಿಟುಗಳ ಹಂಚಿಕೆಯ ಬಗ್ಗೆ ಡೀನರುಗಳ ಸಭೆಯಲ್ಲಿ ಚರ್ಚಿಸಿ ಕ್ರಮಕೈಗೊಳ್ಳಲು ತಿಳಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಶೈ.ಮ.ಸಾ.ಸ 1:5 (2024-25)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "ಪದ್ಮ-ಶಾಸ್ತ್ರಿ (Padma-Shastri) ದತ್ತಿ ಉಪನ್ಯಾಸವನ್ನು ಸ್ಥಾಪಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಶೈ.ಮ.ಸಾ.ಸ 1:6 (2024-25)

**ವಿಷಯ:** ಫಾದರ್ ಮೈಕೆಲ್ ಸಾಂತುಮಯೊರ್, ಶೈಕ್ಷಣಿಕ ಮಂಡಳಿ ಸದಸ್ಯರು ಸಲ್ಲಿಸಿರುವ ಗೊತ್ತುವಳಿ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ಸರಕಾರ ಮತ್ತು ಉನ್ನತ ಶಿಕ್ಷಣ ಪರಿಷತ್ತಿನ ನಿರ್ದೇಶನದಂತೆ ಪ್ರಸಕ್ತ ಸಾಲಿನಿಂದ ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ಪದವಿ ಕಾರ್ಯಕ್ರಮಗಳಿಗೆ ರಾಜ್ಯ ಶಿಕ್ಷಣ ನೀತಿ ನಿಯಮವನ್ನು ಅಳವಡಿಸಿಕೊಳ್ಳುವುದರಿಂದ ಬಿ.ಎಸ್ಸಿ. ಫುಡ್, ನ್ಯೂಟ್ರೀಷನ್ ಆಂಡ್ ಡಯಟಟಿಕ್ಸ್ [B.Sc.(FND)] ಕಾರ್ಯಕ್ರಮದ ವಿದ್ಯಾರ್ಥಿ ಪ್ರವೇಶಾರ್ಹತೆಯನ್ನು ತಿದ್ದುಪಡಿ ಮಾಡಿಕೊಂಡು ಎಲ್ಲಾ ವಿದ್ಯಾರ್ಥಿಗಳು ಈ ಕಾರ್ಯಕ್ರಮವನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಕಾಲೇಜುಗಳಲ್ಲಿ ಬಿ.ಎಸ್ಸಿ.ಫುಡ್,ನ್ಯೂಟ್ರೀಷನ್ ಆಂಡ್ ಡಯಟಟಿಕ್ಸ್ [B.Sc.(FND)] ಮತ್ತು ಬಿ.ಎಸ್ಸಿ.ಇಂಟೀರಿಯರ್ ಡಿಸೈನ್ ಆಂಡ್ ಡೆಕೋರೇಷನ್ [B.Sc.(ID&D)] ಕಾರ್ಯಕ್ರಮಗಳನ್ನು ಕನಿಷ್ಠ ಸಂಖ್ಯೆಯ ಕಾಲೇಜುಗಳಲ್ಲಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗುತ್ತಿದ್ದು, ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳನ್ನು ರಚಿಸುವ ಸಂದರ್ಭಗಳಲ್ಲಿ ಅರ್ಹ, ಅನುಭವಿ ಪ್ರಾಧ್ಯಾಪಕರುಗಳನ್ನು ಪರಿಗಣಿಸಿಕೊಂಡು ಸಮಿತಿ ರಚಿಸಲು ಸೂಕ್ತ ಕ್ರಮಕೈಗೊಳ್ಳಲಾಗುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ 1:7 (2024-25)

**ವಿಷಯ:** ಸ್ನಾತಕೋತ್ತರ ಕಾರ್ಯಕ್ರಮಗಳ ಪಠ್ಯಕ್ರಮಗಳಿಗೆ ಸಂಬಂಧಿಸಿ Learning Outcome ಮತ್ತು Graduate Attributesಗಳ ಅಧಿಸೂಚನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಶೈ.ಮ.ಸಾ.ಸ 1:8 (2024-25)

**ವಿಷಯ:** ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ವಿಸ್ತರಣಾ /ಹೊಸ ಶಾಶ್ವತ/ಶಾಶ್ವತ ಸಂಯೋಜನೆ ಮುಂದುವರಿಕೆ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಗಳು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಗಳನ್ನು ಅಂಗೀಕರಿಸಿ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

ಮುಂದುವರಿದು, ವಿಸ್ತರಣಾ ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳ ತಃಖ್ತೆಯ ಕ್ರಮ ಸಂಖ್ಯೆ 12 ರಲ್ಲಿ ನಮೂದಿಸಲಾದ ಮೆಲ್ಕಾರ್ ಡಿಗ್ರಿ ಕಾಲೇಜು, ಸಜಿಪ ಬಂಟ್ವಾಳ ತಾಲೂಕು ಇಲ್ಲಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿಕೊಂಡ ನಂತರ ಬಿ.ಸಿ.ಎ. ಕಾರ್ಯಕ್ರಮಕ್ಕೆ ಅನುಮೋದನೆ ನೀಡಬಹುದೆಂಬುದಾಗಿ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸನ್ನು ಪರಿಗಣಿಸಲಾಯಿತು.

ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಗಳು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಹಾಗೂ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜು, ಬಂಟ್ವಾಳ ಈ ವಿದ್ಯಾಸಂಸ್ಥೆಯ ವರದಿಯಲ್ಲಿ ನಮೂದಿಸಲಾದ ಅಂಕಿ ಅಂಶಗಳನ್ನು ಸರಿಪಡಿಸಿಕೊಂಡು ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ

ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಗಳನ್ನು ಅಂಗೀಕರಿಸಿ ಶಾಶ್ವತ ಸಂಯೋಜನೆ ಮುಂದುವರಿಕೆ ನೀಡಬಹುದೆಂಬುದಾಗಿ ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಗಳು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಗಳನ್ನು ಅಂಗೀಕರಿಸಿ ಶಾಶ್ವತ ಸಂಯೋಜನೆ ಮುಂದುವರಿಕೆ ನೀಡಬಹುದೆಂಬುದಾಗಿ ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

ಮುಂದುವರಿದು, ಶಾಶ್ವತ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳ ತಃಖ್ತೆಯ ಕ್ರಮ ಸಂಖ್ಯೆ 1 ಮತ್ತು 20ರಲ್ಲಿ ನಮೂದಿಸಿದ ಕಾಲೇಜುಗಳಿಗೆ ಶಾಶ್ವತ ಸಂಯೋಜನೆ ಮುಂದುವರಿಕೆಗೆ ಸ್ಥಳೀಯ ವಿಚಾರಣಾ ಸಮಿತಿಯು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಲಾಯಿತು.

ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಗಳು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಗಳನ್ನು ಅಂಗೀಕರಿಸಿ ಹೊಸ ಶಾಶ್ವತ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಶೈ.ಮ.ಸಾ.ಸ 1:9 (2024-25)

**ವಿಷಯ:** ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಮುಂದುವರಿಕೆ ಸಂಯೋಜನೆ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಗಳು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಗಳನ್ನು ಅಂಗೀಕರಿಸಿ ಮುಂದುವರಿಕೆ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಶೈ.ಮ.ಸಾ.ಸ 1:10 (2024-25)

**ವಿಷಯ:** ಶ್ರೀ ಭಾರತಿ ಕಾಲೇಜು ನಂತೂರು, ಮಂಗಳೂರು ಎಂಬ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2024-25ನೇ ಸಾಲಿನಿಂದ ಹೊಸ ಸಂಯೋಜನೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ ಹೊಸ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಶೈ.ಮ.ಸಾ.ಸ 1:11 (2024-25)

**ವಿಷಯ:** ಎಸ್.ಸಿ.ಎಸ್. ಪ್ರಥಮ ದರ್ಜೆ ಕಾಲೇಜು, ಕೆಇಸಿಟಿ ಟವರ್ಸ್, ಅಶೋಕನಗರ, ಹೊಯ್ಗೆಬೈಲು , ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಅಂಗೀಕರಿಸಿ ಪ್ರಸ್ತಾವನೆಯನ್ನು ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಶೈ.ಮ.ಸಾ.ಸ 1:12 (2024-25)

**ವಿಷಯ:** ತ್ರಿಶಾ ಕಾಲೇಜ್ ಆಫ್ ಕಾಮರ್ಸ್ ಆಂಡ್ ಮ್ಯಾನೇಜ್‌ಮೆಂಟ್, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಅಂಗೀಕರಿಸಿ ಪ್ರಸ್ತಾವನೆಯನ್ನು ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಶೈ.ಮ.ಸಾ.ಸ 1:13 (2024-25)

**ವಿಷಯ:** ತ್ರಿಶಾ ಸಂಧ್ಯಾ ಕಾಲೇಜು, ಕುದ್ರೋಳಿ , ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಅಂಗೀಕರಿಸಿ ಪ್ರಸ್ತಾವನೆಯನ್ನು ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

**ಇತರ ವಿಷಯಗಳು:**

1. ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿ ದಾಖಲಾತಿ ಸಂಖ್ಯೆಗಳು ಬಹುತೇಕ ಕುಂಠಿತವಾಗಿರುವುದನ್ನು ಗಮನಿಸಿಕೊಂಡು, ಎಲ್ಲಾ ವಿದ್ಯಾರ್ಥಿಗಳಿಗೂ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ, ಪ್ರಸಕ್ತ ವಿದ್ಯಾರ್ಥಿ ಪ್ರವೇಶಾರ್ಹತೆಯನ್ನು ಪ್ರಚಲಿತ ವಿದ್ಯಮಾನ, ಉದ್ಯೋಗ ಮಾರುಕಟ್ಟೆಯ ಬೇಡಿಕೆಗಳನ್ನು ಪರಿಗಣಿಸಿಕೊಂಡು ಬದಲಾವಣೆ/ ಮಾರ್ಪಾಡುಗಳನ್ನು ಮಾಡಬೇಕಾಗಿ ಈ ಬಗ್ಗೆ ಎಲ್ಲಾ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಸೂಕ್ತ ಕ್ರಮಕೈಗೊಳ್ಳಬೇಕಾಗಿ ಸಭೆಯಲ್ಲಿ ಸಲಹೆ ನೀಡಲಾಯಿತು.

   ಬಿ.ವೋಕ್ [B.Voc] ಪದವೀಧರರು ಸ್ನಾತಕೋತ್ತರ ವಾಣಿಜ್ಯ ಕಾರ್ಯಕ್ರಮವನ್ನು ವ್ಯಾಸಂಗ ಮಾಡಲು ಅವಕಾಶ ನೀಡಿರುವುದಕ್ಕೆ ಸಭೆಯಲ್ಲಿ ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ಮಂಡಳಿಯನ್ನು ಪ್ರಶಂಸಿಸಿ ಅಭಿನಂದನೆಯನ್ನು ಸಲ್ಲಿಸಲಾಯಿತು.

2. ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿ ಶೀಘ್ರವಾಗಿ ಸರಕಾರದ ಅನುಮೋದನೆಯನ್ನು ಪಡೆಯುವ ಸಲುವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟ ಸರಕಾರಿ, ಅನುದಾನಿತ ಮತ್ತು ಅನುದಾನರಹಿತ ಕಾಲೇಜು ಪ್ರಾಂಶುಪಾಲರಗಳು ಸಭೆ ನಡೆಸಿಕೊಂಡು ನಡವಳಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿ ಹಾಗೂ ಸದರಿ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲಾಗುವುದಾಗಿ ಕುಲಪತಿಯವರು ಸಭೆಯಲ್ಲಿ ಸಲಹೆ ನೀಡಿದರು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |